ಓ ಎಸ್ ನಂ.**132/15**
PW-2

ಸಾಕ್ಷಿಯನ್ನು ಇಂದು ದಿನಾಂಕ 12/09/2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಶ್ರೀಮತಿ. ಎಸ್.ಆರ್.ಜಿ ವಕೀಲರಿಂದ

ನಾನು 5 ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದಿರುತ್ತೇನೆ. ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ. ನಾನು ಇವತ್ತು ಹೂವಿನ ಹಳ್ಳದ ಬಗ್ಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸದರಿ ಹಳ್ಳ ಯಾವ ಊರಿನಿಂದ ಇಂಗಳೇಶ್ವರಕ್ಕೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಇಂಗಳೇಶ್ವರನಲ್ಲಿ ಹಳ್ಳ ಹುಟ್ಟಿರುತ್ತದೆ ದಕ್ಷಿಣದಿಂದ ಉತ್ತರಕ್ಕೆ ಎಂದು ನುಡಿಯುತ್ತೇನೆ. 1 ನೇ ಪ್ರತಿವಾದಿಯು ನನಗೆ ಮಾವನಾಗಬೇಕು. ಸಿದ್ದಪ್ಪ ನಡಕಟ್ಟಿ ಹಾಗೂ ನಾವು ದೂರಿನಿಂದ ಅಣ್ಣತಮ್ಮಂದಿರು ಎಂದರೆ ಸರಿಯಲ್ಲ. ನಾವು ಬೀಗರಾಗಬೇಕು. 1 ರಿಂದ 3 ನೇ ಪ್ರತಿವಾದಿಯರ ತಂದೆ ಸಿದ್ದಪ್ಪ ನಡಕಟ್ಟಿ ಎಂದರೆ ಸರಿ. ಸಿದ್ದಪ್ಪ ನಡಕಟ್ಟಿ ಹಾಗೂ ನಾವು ಮಾತನಾಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂಗಿಯ ಹೆಸರು ಕಲಾವತಿ ಸದರಿಯವಳನ್ನು ವಾದಿಗೆ ಕೊಟ್ಟು ಮದುವೆಯನ್ನು ಮಾಡಿರುತ್ತೇವೆ. ನನ್ನ ಯಾವ ಆಸ್ತಿಯು ವಾದಿ ಹಾಗೂ ಪ್ರತಿವಾದಿಯರ ಆಸ್ತಿಯ ಸನಿಹ ಇರುವುದಿಲ್ಲ. ವಾದಿಯ ಜಮೀನು ಸರ್ವೆ ನಂ. 1280. 1 ನೇ ಪ್ರತಿವಾದಿಯ ಜಮೀನ ಸರ್ವೆ ನಂ. ಗೊತ್ತಿಲ್ಲ. ಪ್ರತಿವಾದಿಯರ ಜಮೀನಿನ ದಕ್ಷಿಣಕ್ಕೆಃ ಅಣ್ಣಪ್ಪ ನಡಕಟ್ಟಿಯವರ ಜಮೀನು ಇದೆ. ಪ್ರತಿವಾದಿಯರ ಜಮೀನ ಉತ್ತರಕ್ಕೆಃ ಬಸಪ್ಪ ಹಳ್ಳಿಯವರ ಜಮೀನು ಇದೆ. ವಾದ ಪತ್ರದಲ್ಲಿ ತೋರಿಸಿದ ಎಮ್.ಎನ್ ಹಳ್ಳದ ಪ್ರತಿವಾದಿಯರ ಜಮೀನಿಂದ ಬಸಪ್ಪ ಹಳ್ಳಿಯವರ ಜಮೀನಕ್ಕೆ ಹೋಗುತ್ತದೆ. ಬಸಪ್ಪ ಹಳ್ಳಿಯ ಹೊಲದಲ್ಲಿ ಹರಿದ ಹಳ್ಳದ ಸ್ಥಿತಿ ಮೊದಲಿನಂತೆ ಇವತ್ತಿಗೂ ಇರುತ್ತದೆ. ಇವತ್ತು ವಾದಿಯ ಹೊಲದಲ್ಲಿ 40 ಮೀಟರ್ ಒಳಗೆ ಹಳ್ಳ ಸರಿದಿರುತ್ತದೆ. ಸದರಿ ಹಳ್ಳವನ್ನು ಪ್ರತಿವಾದಿಯರು 7-8 ರಿಂದ ವರ್ಷಗಳ ಹಿಂದೆ ತಿರುವಿರುತ್ತಾರೆ. ಇವತ್ತಿಗೂ ಹಳ್ಳ ಪ್ರತಿವಾದಿಯರ ಜಮೀನಿನಲ್ಲಿ ಹರಿಯುತ್ತದೆ. ಸದರಿ ಹಳ್ಳ ಹಾಗೂ ವಾದಿಯ ಜಮೀನಿನ ನಡುವೆ ದೊಡ್ಡ ಓಡ್ಡು ಇದೆ ಎಂದರೆ ಸರಿ. ಸದರಿ ಓಡ್ಡನ್ನು ಹಾಕಿದ ಉದ್ದೇಶ ವಾದಿಯ ಹೊಲದಲ್ಲಿ ಹಳ್ಳ ಒತ್ತಿ ಹರಿಯಬಾರದೆಂಬುದು ಎಂದರೆ ಸರಿ. ಸದರಿ ಓಡ್ಡು ಹಾಗೂ ಹಳ್ಳದ ನಡುವೆ ಪ್ರತಿವಾದಿಯರ ಜಮೀನು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಪ್ರತಿವಾದ ಹಾತ ನಕಾಶೆಯನ್ನು ತೋರಿಸಲಾಗಿ ಸಾಕ್ಷಿಯು ಪ್ರತಿವಾದ

ಪತ್ರದ ಹಳ್ಳದ ಹರಿವು ಸರಿಯಾಗಿ ತೋರಿಸಲಾಗಿದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಪ್ರಕೃತಿ ನಿಯಮ ಪ್ರಕಾರ ಹಳ್ಳ ಒತ್ತಿ ಹರಿದಾಗ ಸ್ವಲ್ಪ ದಿಕ್ಕನ್ನು ಬದಲಾಯಿಸುತ್ತದೆ ಎಂದರೆ ಸರಿ. ಅದರಂತೆ ಪ್ರಕೃತಿಯ ನಿಯಮ ಪ್ರಕಾರ ಸದರಿ ಹಳ್ಳ ಸಾಮಾನ್ಯವಾಗಿ ಹರಿಯುವುದಕ್ಕಿಂತ ಸ್ವಲ್ಪ ಸರಿದಿದೆ ಹಾಗೂ ಸದರಿ ಹಳ್ಳವು ಪ್ರತಿವಾದಿಯ ಜಮೀನಿನಲ್ಲಿ ಸರಿದಿದೆ ಎಂದರೆ ಸಾಕ್ಷಿಯು ಪ್ರತಿವಾದಿಯರು ಹಳ್ಳನ್ನು ಸರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಳ್ಳವನ್ನು ಪ್ರತಿವಾದಿಯರು ಸರಿಸಿದರ ಕುರಿತು ನ್ಯಾಯ ಪಂಚಾಯಿತಿ ಮಾಡಿರುತ್ತಾರೆ. ಆದರೆ ನಾನು ಭಾಗವಹಿಸಿರುವುದಿಲ್ಲ. ಸದರಿ ನ್ಯಾಯ ಪಂಚಾಯತಿಯಲ್ಲಿ ಭಾಗವಹಿಸಿದ ಹಿರಿಯರ ಹೆಸರ ನನಗೆ ಹೇಳಲು ಬರುವುದಿಲ್ಲ. ಸದರಿ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರದಿದ್ದರು ನನ್ನ ತಂಗಿಯನ್ನು ವಾದಿಗೆ ಕೊಟ್ಟಿರುವುದರಿಂದ ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಹೌದು ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಬಸವನ ಬಾಗೇವಾಡಿ.